3. ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ

4. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2015

5. ಕರ್ನಾಟಕ ಜಲಸಾರಿಗೆ ಮಂಡಳಿ ವಿಧೇಯಕ, 2015

(ಗೊಂದಲ)

ಶ್ರೀ ಎನ್. ಹೆಚ್. ಕೋನರೆಡ್ಡಿ: ಮಾನ್ಯ ಅಧ್ಯಕ್ಷರೆ, ರೈತರು ಕಳಸಾ ಬಂಡೂರಿ ಬಗ್ಗೆ ನಿರಂತರ ಹೋರಾಟ ಮಾಡುತ್ತಿದ್ದು, ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

12. ಹದಿನಾಲ್ಕನೇ ವಿಧಾನಸಭೆಯ ಎಂಟನೇ ಅಧಿವೇಶನ ಮುಂದುವರೆದ ಉಪವೇಶಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

(ಗೊಂದಲ)

ಅಧ್ಯಕ್ಷರು: ಸದನವನ್ನು ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡಲಾಗಿದೆ.

(ಸದನವು 01 ಗಂಟೆ 28 ನಿಮಿಷಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡಿತು)

12. ಹದಿನಾಲ್ಕನೇ ವಿಧಾನಸಭೆಯ ಎಂಟನೇ ಅಧಿವೇಶನ ಮುಂದುವರೆದ ಉಪವೇಶಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

14ನೇ ವಿಧಾನಸಭೆಯ 8ನೇ ಅಧಿವೇಶನ ಮುಂದುವರೆದ ಉಪವೇಶನವು ದಿನಾಂಕ: 16 ರಿಂದ 27ನೇ ನವೆಂಬರ್ 2015ರ ವರೆಗೆ 10 ದಿನಗಳ ಕಾಲ ಬೆಂಗಳೂರಿನ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಸಭೆ ಸೇರಿ ಒಟ್ಟಾರೆ 24 ಗಂಟೆ 10 ನಿಮಿಷಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಈ ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ವಿಧಾನಸಭೆಯ ಸದಸ್ಯರಾದ ಎ. ವೆಂಕಟೇಶ ನಾಯಕ, ಡಾ॥ ಗುರುಪಾದಪ್ಪ ನಾಗಮಾರಪಲ್ಲಿ, ಜಗದೀಶ್ ಕುಮಾರ್ ಆರ್. ಮಾಜಿ ಸಚಿವರಾದ ಎಂ. ಮಹದೇವ, ಮಾಜಿ ವಿಧಾನಸಭಾ ಸದಸ್ಯರಾದ ಜಿ. ಮಹದೇವಪ್ಪ, ಎಸ್. ಜಯಪ್ರಕಾಶ್ ಶೆಟ್ಟಿ, ಹೆಚ್. ಟಿ. ಕೃಷ್ಣಮೂರ್ತಿ ಹಾಗೂ ಸಾಹಿತಿಗಳಾದ ಕಯ್ಯಾರ ಕಿಂಞ್ಞಣ್ಣ ರೈ. ಡಾ॥ ಎಂ. ಎಂ. ಕಲಬುರ್ಗಿ ಮತ್ತು ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರಾದ ಕೆ. ಎಸ್. ಎಲ್ ಸ್ವಾಮಿ ಹಾಗೂ ಪ್ಯಾರಿಸ್‌ನಲ್ಲಿ ಬಾಂಬ್ ಸ್ಫೋಟದಿಂದ ನಿಧನರಾದ ಹಾಗೂ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಬಗ್ಗೆಯೂ ಸಂತಾಪ ಸೂಚನೆಯನ್ನು ಮಂಡಿಸಿ ಅಂಗೀಕರಿಸಲಾಗಿದೆ.

ಈ ಅಧಿವೇಶನದಲ್ಲಿ ಕೆಳಕಂಡ ಸಮಿತಿಗಳು ವರದಿಯನ್ನು ಸದನಕ್ಕೆ ಒಪ್ಪಿಸಿರುತ್ತವೆ:

1. ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ 5 ಮತ್ತು 6ನೇ ವರದಿ.
2. ಅಂದಾಜುಗಳ ಸಮಿತಿಯ 4ನೇ ವರದಿ
3. ಅಧೀನ ಶಾಸನ ರಚನಾ ಸಮಿತಿಯ 43ನೇ ಅನುಸರಣಾ ವರದಿ.

4. ಅಕ್ರಮ ಮರಳು ಗಣಿಗಾರಿಕೆ ಸಂಬಂಧ ರಚಿಸಲಾಗಿರುವ ಅಧ್ಯಯನ ತಂಡದ ಮಧ್ಯಂತರ ವರದಿ.

ಮಾನ್ಯ ಮುಖ್ಯಮಂತ್ರಿಯವರು 2015–16ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ದಿನಾಂಕ: 26.11.2015 ರಂದು ಮಂಡಿಸಿದ್ದು, ದಿನಾಂಕ: 27.11.2015 ರಂದು ಮತಕ್ಕೆ ಹಾಕಿ ಅಂಗೀಕರಿಸಲಾಗಿರುತ್ತದೆ ಹಾಗೂ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸಲಾಗಿದೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 60ರ ಮೇರೆಗೆ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 03 ಸೂಚನೆಗಳನ್ನು ನಿಯಮ 69ಕ್ಕೆ ಪರಿವರ್ತಿಸಿ 03 ಸೂಚನೆಗಳನ್ನು ಚರ್ಚಿಸಲಾಗಿದೆ. ಒಂದು ಸೂಚನೆಯನ್ನು ತಿರಸ್ಕರಿಸಲಾಗಿದೆ ಹಾಗೂ ನಿಯಮ 69 ರಡಿ ಸ್ವೀಕರಿಸಿದ್ದ 12 ಸೂಚನೆಗಳಲ್ಲಿ 09 ಸೂಚನೆಗಳನ್ನು ಚರ್ಚಿಸಲಾಗಿದೆ.

ಪ್ರಸಕ್ತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ 34 ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ಈ ಅವಧಿಯಲ್ಲಿ ಸ್ವೀಕರಿಸಲಾದ ಒಟ್ಟು 2681 ಪ್ರಶ್ನೆಗಳ ಪೈಕಿ 2263 ಪ್ರಶ್ನೆಗಳನ್ನು ಅಂಗೀಕರಿಸಲಾಗಿರುತ್ತದೆ. ಸದನದಲ್ಲಿ ಉತ್ತರಿಸುವ 150 ಪ್ರಶ್ನೆಗಳ ಪೈಕಿ 142 ಕ್ಕೆ ಹಾಗೂ ಲಿಖಿತ ಮೂಲಕ ಉತ್ತರಿಸುವ 2110 ಪ್ರಶ್ನೆಗಳ ಪೈಕಿ 1572 ಪ್ರಶ್ನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿರುತ್ತದೆ. 06 ಪ್ರಶ್ನೆಗಳ ಸೂಚನಾ ಪತ್ರಗಳು ತಿರಸ್ಕೃತಗೊಂಡಿರುತ್ತವೆ. 03 ಪ್ರಶ್ನೆಗಳು ವರದಿಯಾಗಿರುತ್ತವೆ ಹಾಗೂ 412 ಪ್ರಶ್ನೆಗಳ ಸೂಚನಾ ಪತ್ರಗಳು ಹೆಚ್ಚುವರಿಯಾಗಿರುತ್ತವೆ.

ನಿಯಮ 351ರಡಿಯಲ್ಲಿ ಸ್ವೀಕರಿಸಲಾದ 135 ಸೂಚನೆಗಳಲ್ಲಿ 90 ಸೂಚನೆಗಳು ಅಂಗೀಕೃತಗೊಂಡು 46 ಸೂಚನೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿರುತ್ತದೆ ಹಾಗೂ ಎರಡು ಖಾಸಗಿ ವಿಧೇಯಕಗಳನ್ನು ಮಂಡಿಸಲಾಗಿರುತ್ತದೆ.

ಸದರಿ ಅಧಿವೇಶನದಲ್ಲಿ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮೂರು ಪಟ್ಟಿಗಳನ್ನು ಮಂಡಿಸಲಾಗಿರುತ್ತದೆ. ಅವುಗಳಲ್ಲಿ 71 ವಾರ್ಷಿಕ ವರದಿಗಳು, 39 ಲೆಕ್ಕ ಪರಿಶೋದನಾ ವರದಿಗಳು ಹಾಗೂ 10 ಅಧಿಸೂಚನೆಗಳು ಒಳಗೊಂಡಿರುತ್ತದೆ.

ನಿಯಮ 73ರ ಮೇರೆಗೆ ಒಟ್ಟು 128 ಗಮನ ಸೆಳೆಯುವ ಸೂಚನಾ ಪತ್ರಗಳನ್ನು ಸ್ವೀಕರಿಸಿದ್ದು, ಈ ಪೈಕಿ 15 ಸೂಚನೆಗಳ ಬಗ್ಗೆ ಚರ್ಚೆಯಾಗಿರುತ್ತದೆ.

ವಿಧಾನಸಭೆಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಸೆನೆಟ್‌ಗೆ ಸದಸ್ಯರನ್ನು ಚುನಾಯಿಸುವ ಸಂಬಂಧ ದಿನಾಂಕ: 19.11.2015 ರಂದು ಪ್ರಸ್ತಾವವನ್ನು ಮಂಡಿಸಿದ್ದು, ದಿನಾಂಕ: 26.11.2015 ರಂದು, ಸೆನೆಟ್‌ಗೆ ನಾಮನಿರ್ದೇಶನ ಮಾಡಲು ಮಾನ್ಯ ಸಭಾಧ್ಯಕ್ಷರವರಿಗೆ ಸದನವು ಅಧಿಕಾರ ನೀಡಿರುತ್ತದೆ.

1984ನೇ ಕರ್ನಾಟಕ ಲೋಕಾಯುಕ್ತ ಅಧಿನಿಯಮ (ಕರ್ನಾಟಕ ಲೋಕಾಯುಕ್ತ ತಿದ್ದುಪಡಿ ಅಧಿನಿಯಮ 2015) ನಿಯಮ 6ರ ಅವಕಾಶಗಳಡಿ ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರನ್ನು ಪದಚ್ಯುತಿಗೊಳಿಸುವ ಪ್ರಸ್ತಾವವನ್ನು ಸದನದ ಮುಂದೆ ಮಂಡಿಸಲಾಗಿದೆ.

ಕರ್ನಾಟಕ ಧನವಿನಿಯೋಗ ವಿಧೇಯಕಗಳು ಸೇರಿದಂತೆ ಒಟ್ಟು 07 ವಿಧೇಕಯಗಳನ್ನು ಮಂಡಿಸಲಾಗಿರುತ್ತದೆ. ಇದರ ಪೈಕಿ 06 ವಿಧೇಯಕಗಳನ್ನು ಅಂಗೀಕರಿಸಲಾಗಿರುತ್ತದೆ ಹಾಗೂ 2011ರ ಅವಧಿಯ ಒಂದು ವಿಧೇಯಕವನ್ನು ಹಿಂಪಡೆಯಲಾಗಿರುತ್ತದೆ.

ಸದನದ ಎಲ್ಲಾ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ನನ್ನೊಂದಿಗೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಉಪ ಸಭಾಧ್ಯಕ್ಷರಿಗೆ, ಸರ್ಕಾರಿ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಜನತಾದಳ (ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ, ಸದನದ ಎಲ್ಲಾ ಮಾನ್ಯ

ಸದಸ್ಯರಿಗೆ, ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಅಧಿವೇಶನ ನಡೆಸಲು ಸಹಕರಿಸಿದ ಇಲಾಖಾ ಮುಖ್ಯಸ್ಥರಿಗೂ, ಅಧಿಕಾರಿ ಸಿಬ್ಬಂದಿ ವರ್ಗದವರಿಗೂ ಹಾಗೂ ಕರ್ನಾಟಕ ವಿಧಾನಸಭೆ ಸಚಿವಾಲಯದ ಎಲ್ಲಾ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈಗ ಸದನವನ್ನು ರಾಷ್ಟ್ರಗೀತೆಯೊಂದಿಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.